# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/791/2022
ಪಿ.ಓ. ಎ.ಆರ್.ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ:25/08/2022.
02/9/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀಮತಿ. ಟಿ. ಪ್ರಿಯದರ್ಶಿನಿ ಕೋಂ. ಶ್ರೀ. ಶ್ರೀಕಾಂತ ಚಿಟಗುಪ್ಪಕರ್, ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ), ಜಿಲ್ಲಾ ಆಡಳಿತ ಭವನ, ಕೊಪ್ಪಳರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

*****

1. ಬಳ್ಳಾರಿ ಭ್ರಷ್ಟಾಚಾರ ನಿಗ್ರಹದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರ (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ)ರವರು ತನಿಖಾ ವರದಿ ಮತ್ತು ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀಮತಿ. ಟಿ. ಪ್ರಿಯದರ್ಶಿನಿ ಕೋಂ. ಶ್ರೀ. ಶ್ರೀಕಾಂತ ಚಿಟಗುಪ್ಪಕರ್, ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ), ಜಿಲ್ಲಾ ಆಡಳಿತ ಭವನ, ಕೊಪ್ಪಳ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ನಾಗರಾಜ ಬಿನ್ ಬುಡ್ಡಪ್ಪ ಹಡಪದ, ವಾಸ: ಇಂದರಗಿ, ಕೊಪ್ಪಳ ಜಿಲ್ಲೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಮೋಟಾರ್ ಪಂಪ್‌ಸೆಟ್ ಒದಗಿಸುವ ಬಗ್ಗೆ ಕೇಳಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುತ್ತಾರೆಂದು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಅವರ ಸೇವಾ ಅವಧಿಯಲ್ಲಿ ದುರ್ನಡತೆ ತೋರಿಸಿರುವುದು ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) **ಶ್ರೀ. ನಾಗರಾಜ ಬಿನ್ ಬುಡ್ಡಪ್ಪ ಹಡಪದ, ವಾಸ: ಇಂದರಗಿ, ಕೊಪ್ಪಳ ಜಿಲ್ಲೆ**ರವರಿಗೆ ಅವರ ತಂದೆಯ ಪಿತ್ರಾರ್ಜಿತ ಆಸ್ತಿಯಾದ ಸರ್ವೆ ನಂ.16/3 ಇಂದರಗಿ ಗ್ರಾಮದಲ್ಲಿದ್ದು, ನಂತರ ಅವರ ಪಾಲಿಗೆ ಬಂದಿದ್ದು, ಆ ಜಮೀನಿನ ವಿಸ್ತೀರ್ಣ 3 ಎಕರೆ 2 ಗುಂಟೆಯಾಗಿರುತ್ತದೆ. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ

ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರುರವರು ದಿ: 09/02/2017ರಂದು 2016-17ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯ ಫಲಾಪೇಕ್ಷಿಗಳಿಗೆ ಯೋಜನೆ ಸೌಲಭ್ಯ ಒದಗಿಸುವ ಕುರಿತು ಎದುರುದಾರರಿಗೆ ಪತ್ರ ಬರೆದಿರುತ್ತಾರೆ. ಸದರಿ ಪತ್ರದ ಫಲಾಪೇಕ್ಷಿಗಳ ಪಟ್ಟಿಯ ಕ್ರಮ ಸಂ.03ರಲ್ಲಿ ದೂರುದಾರರ ಹೆಸರು ಇರುತ್ತದೆ. ಸದರಿ ಆದೇಶದ ಅನ್ವಯ 2017ರಲ್ಲಿ ದೂರುದಾರರು ಅವರ ಜಮೀನಿನಲ್ಲಿ ಕೊಳವೆಬಾವಿ ಕೊರೆಸಿದ್ದು, ಎರಡು ಇಂಚು ನೀರು ಬಿದ್ದಿರುತ್ತದೆ. ಕೊಳವೆಬಾವಿಗೆ ಪಂಪ್‌ಸೆಟ್ ನೀಡುವುದು ಬಾಕಿಯಿದ್ದು, ದೂರುದಾರರು ಹಲವಾರು ಬಾರಿ ಎದುರುದಾರರನ್ನು ಪಂಪ್‌ಸೆಟ್ ಬಗ್ಗೆ ವಿಚಾರಿಸಿದಾಗ ಒಂದು ವಾರ ಬಿಟ್ಟು ಬಾ, ಒಂದು ತಿಂಗಳು ಬಿಟ್ಟು ಬಾ ಅಂತ ಹೇಳುತ್ತಾ ಕಾಲಹರಣ ಮಾಡಿ ಕೊಳವೆಬಾವಿಗೆ ಮೋಟಾರ್ ಪಂಪ್‌ಸೆಟ್ ನೀಡಿರುವುದಿಲ್ಲ. ದೂರುದಾರರು 10-15 ದಿನಗಳ ಹಿಂದೆ ಎದುರುದಾರರನ್ನು ಭೇಟಿಯಾಗಿ ಮೋಟಾರ್ ಪಂಪ್‌ಸೆಟ್ ಕೊಡಲು ವಿನಂತಿಸಿಕೊಂಡಾಗ ಎದುರುದಾರರು ಬೆಂಗಳೂರಿನಲ್ಲಿ ಖುದ್ದಾಗಿ ಆದೇಶ ಮಾಡಿಸಿಕೊಂಡು ಬಂದಿದ್ದಕ್ಕಾಗಿ 5,000/- ರೂ. ಕೊಡಬೇಕೆಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದಿ: 12/03/2019ರಂದು ಮಧ್ಯಾಹ್ನ 1.45 ಗಂಟೆ ಸಮಯಕ್ಕೆ ದೂರುದಾರರು ಎದುರುದಾರರನ್ನು ಅವರ ಕಚೇರಿಯಲ್ಲಿ ಭೇಟಿಯಾದಾಗ ಎದುರುದಾರರು ದೂರುದಾರರಿಗೆ "ಎಷ್ಟು ತಂದಿದ್ದೀರಾ, ತಂದಮ್ಯಾಲೆ ಮಾಡಿಕೊಡುತ್ತೀನಿ, ಆವತ್ತು ಐದು ಸಾವಿರ ಹೇಳಿದ್ರೀ ಮೇಡಂ, ನಾಕ್ ಸಾವಿರ ಕೊಡ್ಲಾ ಮೇಡಂ, ಅಂದಾಗ ಎದುರುದಾರರು ಲಂಚದ ಹಣವನ್ನು 4,000/- ರೂ.ಗೆ ಇಳಿಸಿ, ಸದರಿ ಹಣಕ್ಕೆ ಒತ್ತಾಯಿಸಿರುತ್ತಾರೆ. ಆ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದ್ದರಿಂದ ದೂರುದಾರರು ಎದುರುದಾರರ ವಿರುದ್ಧ ದಿನಾಂಕ 13/03/2019ರಂದು ಬಳ್ಳಾರಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಉಪಾಧೀಕ್ಷಕರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.03/2019ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 13/03/2019ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವ ಪಂಚನಾಮೆ ಸಮಯದಲ್ಲಿ 1ನೇ ಪಂಚಸಾಕ್ಷಿದಾರರಾದ ಶ್ರೀ. ಎನ್.ಕುಲಸೇಗರನ್ ಬಿನ್ ನೀಲಮೇಘನ್, ಎಫ್.ಡಿ.ಎ., ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ವಿಭಾಗ ಕಛೇರಿ, ಕೊಪ್ಪಳ ಮತ್ತು 2ನೇ ಪಂಚಸಾಕ್ಷಿದಾರರಾದ

ಪ್ರೊ॥ ಶೋಭಾ ಕೆ.ಎಸ್. ತಂದೆ ಸುಬ್ಬರಾವ್, ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ ಇವರುಗಳನ್ನು ಠಾಣೆಗೆ ಕರೆಯಿಸಿ, ದೂರುದಾರರನ್ನು ಪರಿಚಯಿಸಿ, ದೂರಿನ ಅಂಶಗಳನ್ನು ಅವರಿಗೆ ತಿಳಿಸಿದ ನಂತರ ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ನಂತರ ದೂರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅದರಲ್ಲಿರುವ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಆ ಸಿ.ಡಿ.ಯನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಕೇಳಿದರೆ ಕೊಡಲೆಂದು ತಂದಿರುವ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ದೂರುದಾರರು 4,000/– ರೂ. (500/– ರೂ. ಮುಖಬೆಲೆಯ 8 ನೋಟುಗಳನ್ನು) ಹಾಜರುಪಡಿಸಿದ್ದು, ಸದರಿ ನೋಟುಗಳ ವಿವರಗಳನ್ನು ಪಂಚಸಾಕ್ಷಿ–2ರವರು ಹೇಳಿದಂತೆ ಪಂಚಸಾಕ್ಷಿ–1ರವರು ಹಾಳೆಯಲ್ಲಿ ಮತ್ತು ಸಿಬ್ಬಂದಿಯು ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ ಪಂಚಸಾಕ್ಷಿ–2ರವರ ಮುಖಾಂತರ ದೂರುದಾರರ ಶರ್ಟಿನ ಎಡಜೇಬಿನಲ್ಲಿ ಇಡಿಸಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿಹೋಗಿ ನಿಮ್ಮ ಕೆಲಸದ ಬಗ್ಗೆ ವಿಚಾರಿಸಿ, ಅವರು ಲಂಚದ ಹಣಕ್ಕೆ ಬೇಡಿಕೆ ಇಟ್ಟರೆ, ಪುಡಿಲೇಪಿತ ನೋಟುಗಳನ್ನು ಅವರಿಗೆ ಕೊಡಬೇಕು ಮತ್ತು ಯಾರ ಬಳಿ ಅವರು ಕೊಡಲು ತಿಳಿಸಿದರೆ ಅವರ ಕೈಗೆ ಕೊಡುವುದು ಅಥವಾ ಯಾವುದಾದರೂ ಸ್ಥಳದಲ್ಲಿ ಇಡಲು ತಿಳಿಸಿದರೆ, ಆ ರೀತಿ ಮಾಡಿ ಹೊರಬಂದು ಕೈಗಳಿಂದ ತಲೆಯ ಕೂದಲನ್ನು ಮೇಲಕ್ಕೇರಿಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯು ಧ್ವನಿಮುದ್ರಕವನ್ನು ದೂರುದಾರರಿಗೆ ನೀಡಿ ಎದುರುದಾರರ ಬಳಿ ಹೋಗುವಾಗ ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ತಿಳಿಸಿ ಮತ್ತು ನೆರಳುಸಾಕ್ಷಿಗೆ, ದೂರುದಾರರ ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ, ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iii) ದಿ: 13/03/2019ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಎದುರುದಾರರ ಕಚೇರಿ ಬಳಿ ಮಧ್ಯಾಹ್ನ 1.20 ಗಂಟೆಗೆ ಬಂದಿರುತ್ತಾರೆ. ತನಿಖಾಧಿಕಾರಿಯವರು

ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಸೂಚನೆಗಳನ್ನು ಮತ್ತೊಮ್ಮೆ ನೆನಪಿಸಿ ಎದುರುದಾರರ ಬಳಿ ಕಳುಹಿಸಿದ್ದು, ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕಚೇರಿ ಒಳಗೆ ಹೋಗಿ ಅವರ ಕೆಲಸದ ಬಗ್ಗೆ ಕೇಳಿದಾಗ ಎದುರುದಾರರು, ನಿಮ್ಮದು ಲೇಟ್ ಆಗುತ್ತೆ ಎಲೆಕ್ಷನ್ ಆಗಬೇಕು, ಹಣ ಇದ್ದರೆ ಕೊಡಿ ಅಂತ ಕೇಳಿದಾಗ ದೂರುದಾರರು ಅವರ ಬಳಿಯಿದ್ದ ಪುಡಿಲೇಪಿತ ನೋಟುಗಳನ್ನು ನೀಡಿದಾಗ ಎದುರುದಾರರು ಅವರ ಬಲಗೈನಿಂದ ಪಡೆದುಕೊಂಡು ಅವರ ಮುಂದೆ ಇದ್ದ ಹಸಿರು ಬಣ್ಣದ ಡೈರಿಯಲ್ಲಿ ಇಟ್ಟು, ಆ ಡೈರಿಯನ್ನು ಅವರ ವ್ಯಾನಿಟಿ ಬ್ಯಾಗಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಮೇಲೆ ದೂರುದಾರರು ಕಚೇರಿಯಿಂದ ಹೊರಬಂದು ಅವರ ಕೈಗಳಿಂದ ತಲೆಯ ಕೂದಲನ್ನು ಮೇಲಕ್ಕೇರಿಸಿಕೊಳ್ಳುವ ಮೂಲಕ ಸೂಚನೆ ನೀಡಿರುತ್ತಾರೆ. ಆಗ ತನಿಖಾಧಿಕಾರಿಯ ತಂಡದವರು ದೂರುದಾರರ ಬಳಿ ಬಂದಾಗ ದೂರುದಾರರು ಎದುರುದಾರರನ್ನು ತನಿಖಾಧಿಕಾರಿಯವರಿಗೆ ತೋರಿಸಿದಾಗ, ಅವರು ಗುರುತಿನ ಚೀಟಿಯನ್ನು ಎದುರುದಾರರಿಗೆ ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ.

ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಮೂರು ಬಟ್ಟಲುಗಳಲ್ಲಿ ತೆಗೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ಯಾವುದೇ ಬಣ್ಣಕ್ಕೆ ತಿರುಗಿರುವುದಿಲ್ಲ. ಎರಡನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣಗಳನ್ನು ತನಿಖಾಧಿಕಾರಿಯವರು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಂದ ಪಡೆದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ ಎದುರುದಾರರು ಅವರ ವ್ಯಾನಿಟಿಬ್ಯಾಗ್ ತೆಗೆದು ಅದರಲ್ಲಿದ್ದ ಹಸಿರು ಬಣ್ಣದ ಡೈರಿಯಲ್ಲಿಟ್ಟಿದ್ದ ಹಣವನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ-2ರವರು ಆ ನೋಟುಗಳ ವಿವರಗಳನ್ನು ಹೇಳಿದ್ದು, ಪಂಚಸಾಕ್ಷಿ-1ರವರು ಅವರ ಬಳಿಯಿದ್ದ ಹಾಳೆಯಲ್ಲಿ ನಮುದಿಸಿಕೊಂಡಿದ್ದ ನೋಟುಗಳ ವಿವರಗಳಿಗೆ ಮತ್ತು ಪ್ರಾಯೋಗಿಕಾ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ವಿವರಗಳಿಗೆ ಪರಿಶೀಲಿಸಿದಾಗ, ಆ ವಿವರಗಳು ಹಾಳೆಯಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳಿಗೆ ತಾಳೆಯಾದ್ದರಿಂದ ಆ ನೋಟುಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ಸ್ವಲ್ಪ ಹತ್ತಿಯ ತುಂಡನ್ನು ತೆಗೆದುಕೊಂಡು, ಪುಡಿಲೇಪಿತ

ನೋಟುಗಳನ್ನು ಇಟ್ಟುಕೊಂಡಿದ್ದ ಡೈರಿಯ ಹಾಳೆಗಳ ಮೇಲೆ ಒರೆಸಿ, ಆ ಹತ್ತಿಯ ತುಂಡನ್ನು ಮೂರನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ದ್ರಾವಣವನ್ನು ಮತ್ತು ಹತ್ತಿಯನ್ನು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ಅವರ ಸಮಜಾಯಿಷಿಯಲ್ಲಿ "ಇಂದು ಮಧ್ಯಾಹ್ನ 13/03/2019ರಂದು ಲಂಚ ತೆಗೆದುಕೊಂಡೆನೆಂದು ಆರೋಪಿಸಿರುವುದು ಸತ್ಯಕ್ಕೆ ದೂರವಾಗಿರುತ್ತದೆ. ಆರೋಪಿಸಿದ ವ್ಯಕ್ತಿಯು ನಿನ್ನೆ ಮತ್ತು ಇಂದು ಮುಂಜಾನೆ ಆಫೀಸಿಗೆ ಬಂದು ಗಂಗಾ ಕಲ್ಯಾಣ ಯೋಜನೆಯ ಮೋಟಾರ್ ಪಂಪ್ ತರಿಸಿಕೊಡಿ ಎಂದು ಒತ್ತಾಯಪಡಿಸುತ್ತಿದ್ದರು, ಅದಕ್ಕೆ ಕೇಂದ್ರ ಕಚೇರಿಯಿಂದ ಕ್ಯಾಲ್ಯುಕುಲೇಷನ್ ಶೀಟ್ ಬಂದ ಕೂಡಲೇ ಕಂಪನಿಯವರಿಗೆ ಸಪ್ಲೈ ಮಾಡಲು ಪತ್ರ ಬರೆಯುತ್ತೇನೆ ಹಾಗೂ ಈಗ ಕೋಡ್ ಆಫ್ ಕಾಂಡಕ್ಟ್ ಇರುವುದರಿಂದ ತಡವಾಗಬಹುದು ಎಂದು ತಿಳಿಸಿರುತ್ತೇನೆ. ನಂತರ ಆ ವ್ಯಕ್ತಿಯು ಮೋಟಾರ್ ಪಂಪ್ ತರಿಸಿಕೊಡಿ ಎಂದು ಒತ್ತಾಯಿಸಿ ಹಣವನ್ನು ಫೈಲ್ ಕೆಳಗೆ ಇಟ್ಟುಹೋಗಿರುತ್ತಾನೆ. ಆ ಹಣವನ್ನು ತೆಗೆದುಕೊಂಡು ಹೋಗು ಎಂದರೂ ಹಾಗೆಯೇ ಮಾತನ್ನು ಕೇಳಿಸಿಕೊಳ್ಳದೇ ಹೋಗಿರುತ್ತಾನೆ. ತದನಂತರ, ಹಣವನ್ನು ಮರಳಿ ನೀಡಬೇಕೆಂದು ಸೈಡಿನಲ್ಲಿ ಇಟ್ಟುಕೊಂಡೆ ........... ನಾನು ಲಂಚಪಡೆಯುವ ಕೆಲಸ ಮಾಡಿರುವುದಿಲ್ಲವೆಂದು" ಬರೆದುಕೊಟ್ಟಿರುತ್ತಾರೆ. ದೂರುದಾರರು ಮತ್ತು ನೆರಳುಸಾಕ್ಷಿ ಸದರಿ ಸಮಜಾಯಿಷಿಯನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಲಂಚದ ಹಣ ಕೇಳಿದ್ದರಿಂದ, ಅವರು ಕೇಳಿದಂತೆ ಲಂಚದ ಹಣವನ್ನು ನೀಡಿರುತ್ತೇನೆಂದು ದೂರುದಾರರು ಹೇಳಿರುತ್ತಾರೆ.

ತನಿಖಾಧಿಕಾರಿಯವರು ದೂರುದಾರರಿಗೆ ನೀಡಿದ ಧ್ವನಿಮುದ್ರಕವನ್ನು ಹಾಜರುಪಡಿಸುವಂತೆ ತಿಳಿಸಿದಾಗ, ದೂರುದಾರರು ಧ್ವನಿಮುದ್ರಕವನ್ನು ಚಾಲನಾ ಸ್ಥಿತಿಯಲ್ಲಿಟ್ಟುಕೊಂಡಿರಲಿಲ್ಲವೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರಿಂದ ದೂರುದಾರರಿಗೆ ಸಂಬಂಧಪಟ್ಟ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಪಡೆದು ಅವುಗಳಿಗೆ ಎದುರುದಾರರ ಕಚೇರಿಯ ಪ್ರಥಮ ದರ್ಜೆ ಸಹಾಯಕರಾದ ಶ್ರೀ. ಜೀವನ ಪ್ರಸಾದ್‌ರವರಿಂದ ದೃಢೀಕರಿಸಿ ವಶಕ್ಕೆ ಪಡೆದಿರುತ್ತಾರೆ. ನಂತರ ಎದುರುದಾರರನ್ನು ದಸ್ತಗಿರಿ ಮಾಡಿ ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ. ಜಪ್ತಿ ಪಂಚನಾಮೆ ಮುಗಿದ ನಂತರ ಎದುರುದಾರರ ಕಚೇರಿಯಲ್ಲಿಯೇ ಎದುರುದಾರರ ಮಾದರಿ ಧ್ವನಿಯನ್ನು

ಪಡೆದುಕೊಂಡು ಆ ಧ್ವನಿಯನ್ನು ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಸಿ.ಡಿ.ಯಲ್ಲಿದ್ದ ಸಂಭಾಷಣೆಯನ್ನು ಎದುರುದಾರರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಮತಿ. ನೇತ್ರಾವತಿ, ದ್ವಿತೀಯ ದರ್ಜೆ ಸಹಾಯಕರನ್ನು ಕರೆಯಿಸಿ ಅವರಿಗೆ ಕೇಳಿಸಿದಾಗ ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ನಂತರ ದೂರುದಾರರ ಮಾದರಿ ಧ್ವನಿಯನ್ನು ಪಡೆದು ಆ ಧ್ವನಿಯನ್ನು ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಎದುರುದಾರರ ಮತ್ತು ದೂರುದಾರರ ಮಾದರಿ ಧ್ವನಿಯ ಸಿ.ಡಿ.ಗಳನ್ನು ತನಿಖಾಧಿಕಾರಿಯವರು ಪಂಚನಾಮೆ ಬರೆಯುವ ಮೂಲಕ ವಶಕ್ಕೆ ಪಡೆದಿರುತ್ತಾರೆ.

iv) ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ ಮತ್ತು ದಾಖಲೆಗಳನ್ನು ಕಲೆ ಹಾಕಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ಧ್ವನಿ ವಿಶ್ಲೇಷಣಾ ವರದಿ ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, ಎದುರುದಾರರು ದಿ: 04/05/2022ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಅವರ ಸಮಜಾಯಿಷಿಯಲ್ಲಿ "ದೂರುದಾರರಿಗೆ ಪಂಪ್‌ಸೆಟ್ ಒದಗಿಸುವ ಕುರಿತು ಹಣವನ್ನು ಕೊಡಿರಿ ಅಂತ ಕೇಳಿರುವುದಿಲ್ಲ ಹಾಗೂ ಪಡೆದುಕೊಂಡಿರುವುದಿಲ್ಲವೆಂದು ಮತ್ತು ಯಾವುದೇ ರೀತಿಯ ಕರ್ತವ್ಯಲೋಪ ಮಾಡಿರುವುದಿಲ್ಲ ಹಾಗೂ ಬೇಜವಾಬ್ದಾರಿಯಿಂದ ವರ್ತಿಸಿರುವುದಿಲ್ಲವೆಂದು ಪರಿವೀಕ್ಷಣಾ ಟಿಪ್ಪಣಿಯ ವಿಷಯದ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ಪ್ರಾರಂಭವಾಗುವ ಸಾಧ್ಯತೆ ಇರುವುದರಿಂದ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಬಾರದೆಂದು" ಸಮಜಾಯಿಷಿ ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ಕಾರಣ, ಧ್ವನಿ ಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ತಾಳೆಯಾಗಿರುವುದಾಗಿ ಹಾಗೂ ಎದುರುದಾರರಿಂದ ತನಿಖಾಧಿಕಾರಿಯವರು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮತ್ತು ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6. ಈ ಮೇಲ್ಕಂಡ ಅಂಶಗಳಿಗಾಗಿ ಎದುರುದಾರರಾದ ಶ್ರೀಮತಿ. ಟಿ. ಪ್ರಿಯದರ್ಶಿನಿ ಕೋಂ ಶ್ರೀಕಾಂತ (ನಿವೃತ್ತಿ ದಿನಾಂಕ: 31/01/2032) ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3)ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

2/9/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.